# ಮೈಸೂರು ವಿಶ್ವವಿದ್ಯಾನಿಲಯ

ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಸಿಂಡಿಕೇಟ್ ಸಭಾಂಗಣದಲ್ಲಿ ದಿನಾಂಕ:24-09-2021ರ ಮಧ್ಯಾಹ್ನ 3.00 ಗಂಟೆಗೆ ನಡೆದ ವಿಶೇಷ ಸಿಂಡಿಕೇಟ್ ಸಭೆಯ ನಡವಳಿಗಳು.

ಹಾಜರಿದ್ದ ಸದಸ್ಯರುಗಳು:

| | | |
|---|---|---|
| 1. | ಪ್ರೊ. ಜಿ.ಹೇಮಂತಕುಮಾರ್ | ಕುಲಪತಿಗಳು ಹಾಗೂ ಅಧ್ಯಕ್ಷರು |
| 2. | ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ ಇವರ ಪರವಾಗಿ ಶ್ರೀ ಕೆ.ಸಿ ವೀರಭದ್ರಯ್ಯ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಮೈಸೂರು. | ಸದಸ್ಯರು |
| 3. | ಪ್ರೊ. ಜಿ.ವೆಂಕಟೇಶ್ ಕುಮಾರ್ | ಸದಸ್ಯರು |
| 4. | ಶ್ರೀ ಎಂ.ಬಿ. ಗಪ್ಪಣ್ಣ | ಸದಸ್ಯರು |
| 5. | ಡಾ. ಚೈತ್ರ ನಾರಾಯಣ | ಸದಸ್ಯರು |
| 6. | ಡಾ. ವೆಂಕಟೇಶಯ್ಯ | ಸದಸ್ಯರು |
| 7. | ಡಾ. ನಾಗರಾಜು | ಸದಸ್ಯರು |
| 8. | ಡಾ. ಬಿ.ರಾಜಣ್ಣ | ಸದಸ್ಯರು |
| 9. | ಡಾ. ವೆಂಕಟೇಶ್ ಜೆ ಎನ್ | ಸದಸ್ಯರು |
| 10. | ಶ್ರೀ. ಆರ್.ಪ್ರದೀಪ್ ಕುಮಾರ್ ದೀಕ್ಷಿತ್ | ಸದಸ್ಯರು |
| 11. | ಶ್ರೀ ಎಸ್.ಡಿ.ದೊಡ್ಡಚಾರಿ | ಸದಸ್ಯರು |
| 12. | ಶ್ರೀಮತಿ ವೈ.ಕೆ.ಪವಿತ್ರ | ಸದಸ್ಯರು |
| 13. | ಡಾ. ಈ.ಸಿ.ನಿಂಗರಾಜ್ ಗೌಡ | ಸದಸ್ಯರು |
| 14. | ಡಾ. ಎಂ.ಎಸ್.ದಾಮೋಧರ | ಸದಸ್ಯರು |
| 15. | ಡಾ. ಸೈಯದ್ ಕಾರ್ಲು ಮೊಹಿದ್ದೀನ್ | ಸದಸ್ಯರು |
| 16. | ಪ್ರೊ. ಎ.ಪಿ. ಜ್ಞಾನ ಪ್ರಕಾಶ್, ಕುಲಸಚಿವರು (ಪರೀಕ್ಷಾಂಗ) | ಸದಸ್ಯರು |
| 17. | ಡಾ. ಸಂಗೀತಾ ಗಜಾನನ್ ಭಟ್, ಹಣಕಾಸು ಅಧಿಕಾರಿಗಳು | ಸದಸ್ಯರು |
| 18. | ಪ್ರೊ. ಆರ್.ಶಿವಪ್ಪ | ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿ |

ಹಾಜರಾಗದ ಸದಸ್ಯರು:

1. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
2. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
3. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
4. ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.

ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ಸಭೆಗೆ ಹಾಜರಿದ್ದ ಸದಸ್ಯರುಗಳನ್ನು ಹುತ್ಪೂರ್ವಕವಾಗಿ ಸ್ವಾಗತಿಸಿದರು.

ಮಾನ್ಯ ಕುಲಪತಿಗಳು ಕಾರ್ಯಸೂಚಿಯಲ್ಲಿನ ವಿಷಯಗಳನ್ನು ಸಭೆಯಲ್ಲಿ ಮಂಡಿಸಿದರು.

| ವಿಷಯ ಸಂಖ್ಯೆ | ವಿಷಯ ಸಂಕ್ಷಿಪ್ತವಾಗಿ |
|---|---|
| ವಿಶೇಷ ಸಭೆ-01 | 2021-22ನೇ ಶೈಕ್ಷಣಿಕ ವರ್ಷಕ್ಕೆ ಸ್ಥಳೀಯಾ ತನಿಖಾ ಸಮಿತಿಯು virtual meeting ಮೂಲಕ ಆನ್‌ಲೈನ್ ಸಂಯೋಜನಾ ವರದಿಗಳನ್ನು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸುವ ಬಗೆಗೆ. |

2021-22ನೇ ಶೈಕ್ಷಣಿಕ ಸಾಲಿಗೆ ಹಾಲಿ ಅಸ್ತಿತ್ವದಲ್ಲಿರುವ ಪ್ರಥಮ ದರ್ಜೆ ಕಾಲೇಜುಗಳಿಗೆ ಸಂಯೋಜನೆ ಮುಂದುವರಿಸಲು/ಪ್ರಥಮ ದರ್ಜೆ ಕಾಲೇಜುಗಳಲ್ಲಿ ಹೊಸ ಕೋರ್ಸುಗಳು /ವಿಷಯಗಳು/ ಕಾಂಬಿನೇಷನ್‌ಗಳನ್ನು ಪ್ರಾರಂಭಿಸಲು/ನವೀಕರಿಸಲು ಹಾಗೂ ಹಾಲಿ ಇರುವ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಶಾಶ್ವತ ಸಂಯೋಜನೆ ಕೋರಿರುವ ಕೋರ್ಸುಗಳಿಗೆ ಹೊಸದಾಗಿ ಶಾಶ್ವತ ಸಂಯೋಜನೆ ನೀಡಲು/ಸಂಪೂರ್ಣ ಶಾಶ್ವತ ಸಂಯೋಜನೆ ಹೊಂದಿರುವ ಕಾಲೇಜುಗಳನ್ನು ನವೀಕರಿಸಲು/ಶಿಕ್ಷಣ ಕಾಲೇಜುಗಳಿಗೆ ಸಂಯೋಜನೆ ಮುಂದುವರೆಸಲು/ಹೊಸ ಪ್ರಥಮ ದರ್ಜೆ ಕಾಲೇಜುಗಳನ್ನು ಪ್ರಾರಂಭಿಸಲು, ಹಾಲಿ ಅಸ್ತಿತ್ವದಲ್ಲಿರುವ ಕಾಲೇಜುಗಳ ಸ್ನಾತಕೋತ್ತರ ಕೋರ್ಸುಗಳಿಗೆ ಸಂಯೋಜನೆ ಮುಂದುವರೆಸಲು, ಪ್ರಥಮ ದರ್ಜೆ ಕಾಲೇಜುಗಳಲ್ಲಿ ಹೊಸದಾಗಿ ಸ್ನಾತಕೋತ್ತರ ಕೋರ್ಸುಗಳನ್ನು ಪ್ರಾರಂಭಿಸಲು ಮತ್ತು ಯುಜಿಸಿ ಆ್ಯಡ್‌ಆನ್‌ನ ಕೋರ್ಸುಗಳನ್ನು ಮುಂದುವರಿಸಲು /ಹಾಲಿ ಅಸ್ತಿತ್ವದಲ್ಲಿರುವ ಕೋರ್ಸುಗಳಿಗೆ ಪ್ರವೇಶಾತಿ ಸಂಖ್ಯೆಯನ್ನು ಹೆಚ್ಚಿಸುವ ಬಗೆಗೆ ಸ್ಥಳೀಯ ವಿಚಾರಣಾ ಸಮಿತಿಯವರು ಸಲ್ಲಿಸಿರುವ ಆನ್‌ಲೈನ್ ಸಂಯೋಜನಾ ವರದಿಯ ಸಾರಾಂಶ.

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000 ಪ್ರಕರಣ 59(3)ರ ಮೇರೆಗೆ ಕೆಳಕಂಡಂತೆ ಕಾಲೇಜುವಾರು/ಶಿಕ್ಷಣ ಸಂಸ್ಥೆಗಳು ಸಂಯೋಜನೆಯನ್ನು ಮುಂದುವರೆಸಲು, ಹೊಸದಾಗಿ ಸಂಯೋಜನೆ ನೀಡಲು, ಪ್ರವೇಶಾತಿ ಹೆಚ್ಚಳ ಮಾಡಲು, ಶಾಶ್ವತ ಸಂಯೋಜನೆ ನೀಡಲು, ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳು ಹಾಗೂ ಸ್ವಾಯತ್ತ ಕಾಲೇಜುಗಳನ್ನು ಹೊರತುಪಡಿಸಿ ಸ್ಥಳೀಯ ವಿಚಾರಣಾ ಸಮಿತಿ ಶಿಫಾರಸ್ಸು ಮಾಡಿರುವ ಕಾಲೇಜುಗಳ ವಿವರ ಮತ್ತು ಪಟ್ಟಿಯನ್ನು ಲಗತ್ತಿಸಿದೆ.

**I. 2021-22ನೇ ಶೈಕ್ಷಣಿಕ ವರ್ಷಕ್ಕೆ ಆನ್‌ಲೈನ್ ಸಂಯೋಜನೆ ನೀಡಿರುವ ಪ್ರಥಮ ದರ್ಜೆ ಕಾಲೇಜುಗಳ ವಿವರ:**

| ಕ್ರ.ಸಂ | ಮೈಸೂರು ಜಿಲ್ಲೆ | |
|---|---|---|
| 1 | ಸರ್ಕಾರಿ ಪ್ರ.ದ.ಕಾಲೇಜುಗಳು | 23 |
| 2 | ಅನುದಾನಿತ ಪ್ರ.ದ.ಕಾ | 08 |
| 3 | ಅನುದಾನರಹಿತ ಪ್ರ.ದ.ಕಾ | 46 |
| 4 | ಹೋಟೇಲ್ ಮ್ಯಾನೇಜ್‌ಮೆಂಟ್ ಇನ್‌ಸ್ಟಿಟ್ಯೂಷನ್ಸ್ | 01 |
| 5 | ವಾಕ್ ಮತ್ತು ಶ್ರವಣ ಸಂಸ್ಥೆಗಳು | 02 |
| | ಒಟ್ಟು: | **80** |
| | ಚಾಮರಾಜನಗರ ಜಿಲ್ಲೆ | |
| 1 | ಸರ್ಕಾರಿ ಪ್ರ.ದ.ಕಾಲೇಜುಗಳು | 08 |
| 2 | ಅನುದಾನಿತ ಪ್ರ.ದ.ಕಾ | 04 |
| 3 | ಅನುದಾನರಹಿತ ಪ್ರ.ದ.ಕಾ | 05 |
| | ಒಟ್ಟು: | **17** |
| | ಮಂಡ್ಯ ಜಿಲ್ಲೆ | |
| 1 | ಸರ್ಕಾರಿ ಪ್ರ.ದ.ಕಾಲೇಜುಗಳು | 13 |
| 2 | ಅನುದಾನಿತ ಪ್ರ.ದ.ಕಾ. | 06 |
| 3 | ಅನುದಾನರಹಿತ ಪ್ರ.ದ.ಕಾ | 14 |
| | ಒಟ್ಟು: | **33** |

| ಕ್ರ.ಸಂ | ಹಾಸನ ಜಿಲ್ಲೆ | |
|---|---|---|
| 1 | ಸರ್ಕಾರಿ ಪ್ರ.ದ.ಕಾಲೇಜುಗಳು | 22 |
| 2 | ಅನುದಾನಿತ ಪ್ರ.ದ.ಕಾ | 05 |
| 3 | ಅನುದಾನರಹಿತ ಪ್ರ.ದ.ಕಾ | 14 |
| | ಒಟ್ಟು: | **41** |

**II. 2021–22ನೇ ಶೈಕ್ಷಣಿಕ ವರ್ಷಕ್ಕೆ ಆನ್‌ಲೈನ್ ಸಂಯೋಜನೆ ನೀಡಿರುವ ಶಿಕ್ಷಣ ಕಾಲೇಜುಗಳು:**

| ಕ್ರ.ಸಂ | ಶಿಕ್ಷಣ ಕಾಲೇಜುಗಳು | |
|---|---|---|
| | ಮೈಸೂರು ಜಿಲ್ಲೆ | |
| 1 | ಸರ್ಕಾರಿ ಶಿಕ್ಷಣ ಕಾಲೇಜು | 01 |
| 2 | ರೀಜನಲ್ ಇನ್ಸ್‌ಟಿಟ್ಯೂಟ್ ಆಫ್ ಎಜುಕೇಷನ್ | 01 |
| 3 | ಅನುದಾನಿತ ಶಿಕ್ಷಣ ಕಾಲೇಜುಗಳು | 04 |
| 4 | ಅನುದಾನರಹಿತ ಶಿಕ್ಷಣ ಕಾಲೇಜುಗಳು | 07 |
| | ಚಾಮರಾಜನಗರ ಜಿಲ್ಲೆ | |
| 1 | ಅನುದಾನರಹಿತ ಶಿಕ್ಷಣ ಕಾಲೇಜುಗಳು | 02 |
| | ಮಂಡ್ಯ ಜಿಲ್ಲೆ | |
| 1 | ಅನುದಾನಿತ ಶಿಕ್ಷಣ ಕಾಲೇಜು | 01 |
| 2 | ಅನುದಾನರಹಿತ ಶಿಕ್ಷಣ ಕಾಲೇಜುಗಳು | 08 |
| 3 | ದೈಹಿಕ ಶಿಕ್ಷಣ ಕಾಲೇಜುಗಳು | 02 |
| | ಹಾಸನ ಜಿಲ್ಲೆ | |
| 1 | ಅನುದಾನಿತ ಶಿಕ್ಷಣ ಕಾಲೇಜುಗಳು | 04 |
| 2 | ಅನುದಾನರಹಿತ ಶಿಕ್ಷಣ ಕಾಲೇಜುಗಳು | 04 |
| | ಒಟ್ಟು: | **34** |

**III. 2021–22ನೇ ಶೈಕ್ಷಣಿಕ ಸಾಲಿನ ಹೊಸ ಪ್ರಥಮ ದರ್ಜೆ ಕಾಲೇಜುಗಳ ವಿವರ:**

| ಕ್ರ.ಸಂ | ಕಾಲೇಜಿನ ಹೆಸರು | ಕೋರ್ಸುಗಳ |
|---|---|---|
| 1 | ಗ್ಲೋಬಲ್ ಎಜುಕೇಶನ್ ಟ್ರಸ್ಟ್ (ರಿ),<br>ಗೆಟ್ಸ್ ಅಕ್ಯಾಡೆಮಿ, ಹೂಟಗಳ್ಳಿ, ಮೈಸೂರು | ಬಿ.ಕಾಂ – 60<br>ಬಿ.ಸಿ.ಎ. – 60 |
| 2 | ಕಾವೇರಿ ಎಜುಕೇಷನ್ ಮತ್ತು ಸಂಶೋಧನಾ (ರಿ),<br>ಕಾವೇರಿ ಪದವಿ ಕಾಲೇಜು, ಸುಂಡಹಳ್ಳಿ, ಮಂಡ್ಯ | ಬಿ.ಕಾಂ – 60<br>ಬಿ.ಸಿ.ಎ. – 60 |

**IV. ಮುಂದುವರಿಕೆ ಸಂಯೋಜನೆ ಕೋರಿ ಅರ್ಜಿ ಸಲ್ಲಿಸದೇ ಇರುವ ಪ್ರಥಮ ದರ್ಜೆ ಕಾಲೇಜುಗಳು:**

ಯಾವುದೂ ಇಲ್ಲ.

**V. ಹೊಸ ಪ್ರಥಮ ದರ್ಜೆ ಕಾಲೇಜಿಗೆ ಸಂಯೋಜನೆ ಕೋರಿ ಅರ್ಜಿ ಸಲ್ಲಿಸಿದ್ದು, ನಂತರ ಸಂಯೋಜನೆ ನಿರಾಕರಿಸಿರುವ ಪ್ರಥಮ ದರ್ಜೆ ಕಾಲೇಜು – 01**

1. ಸಮಗ್ರ ಅಕ್ಯಾಡೆಮಿ ಫಾರ್ ಹೈಯರ್ ಎಜುಕೇಷನ್ ಅಂಡ್ ಇನೋವೇಷನ್ – ಬಿ.ಕಾಂ., ಬಿ.ಸಿ.ಎ.

| | |
|---|---|
| | **VI. NCTE ಮಾನ್ಯತೆ ಇಲ್ಲದ ಕಾರಣ ಸಂಯೋಜನೆ ಕೈಗೊಳ್ಳದ ಶಿಕ್ಷಣ ಕಾಲೇಜುಗಳ ವಿವರ:**<br>1. ವಿಜಯ ಶಿಕ್ಷಣ ಮಹಾವಿದ್ಯಾಲಯ, ಪಾಂಡವಪುರ.<br>2. ಯಡತೊರೆ ಶಿಕ್ಷಣ ಮಹಾವಿದ್ಯಾಲಯ, ಕೆ.ಆರ್. ನಗರ<br>3. ಮೌಲನಾ ಅಜಾದ್ ಶಿಕ್ಷಣ ಕಾಲೇಜು, ಮೈಸೂರು<br>4. ವಿ. ಎಂ. ಲಿಂಗಯ್ಯ ಶಿಕ್ಷಣ ಕಾಲೇಜು, ಸೋಮನಹಳ್ಳಿ<br>**VII. 2021-22ನೇ ಶೈಕ್ಷಣಿಕ ಸಾಲಿಗೆ ಆನ್‌ಲೈನ್ ಸಂಯೋಜನೆ ನೀಡಿರುವ ಒಟ್ಟು ಕಾಲೇಜುಗಳ ಸಂಖ್ಯೆ: 207**<br>ಕಾಲೇಜುಗಳಿಗೆ ಸಂಯೋಜನೆ ನೀಡುವ ಬಗೆಗೆ ಪರಿಶೀಲನೆ ನಡೆಸಲು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000, ಪ್ರಕರಣ 59 (6) (2)ನೇ ಉಪಪ್ರಕರಣದ ಮೇರೆಗೆ ಮೇಲ್ಕಂಡ ಕಾಲೇಜುಗಳು/ಶಿಕ್ಷಣ ಸಂಸ್ಥೆಗಳು ಸಲ್ಲಿಸಿದ್ದ ಅರ್ಜಿಗಳ ಪರಿಶೀಲನೆಗಾಗಿ ಹಾಗೂ ಸ್ಥಳೀಯ ವಿಚಾರಣಾ ಸಮಿತಿಗಳನ್ನು ರಚಿಸಲು ಸಿಂಡಿಕೇಟ್ ಸಭೆಯ ಮುಂದೆ ವಿಷಯವನ್ನು ಮಂಡಿಸಲಾಗಿತ್ತು. ಸಿಂಡಿಕೇಟ್ ಸಭೆಯಲ್ಲಿ 2021-22ನೇ ಶೈಕ್ಷಣಿಕ ವರ್ಷಕ್ಕೆ ಕಾಲೇಜುಗಳಿಗೆ ಸಂಯೋಜನೆ ನೀಡುವ ಬಗೆಗೆ ಸ್ಥಳೀಯ ವಿಚಾರಣಾ ಸಮಿತಿಗಳನ್ನು ರಚಿಸಲು ಮಾನ್ಯ ಕುಲಪತಿಯವರಿಗೆ ಅಧಿಕಾರವನ್ನು ನೀಡಲಾಯಿತು.<br>ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಬರುವ ಹಾಲಿ ಅಸ್ತಿತ್ವದಲ್ಲಿರುವ ಸಂಯೋಜಿತ ಕಾಲೇಜುಗಳಲ್ಲಿ ಹೊಸ ವ್ಯಾಸಂಗ ಕ್ರಮಗಳು, ಹೊಸವಿಷಯಗಳು, ಪ್ರವೇಶವಕಾಶದಲ್ಲಿನ ಬದಲಾವಣೆ, ಪ್ರವೇಶಾತಿ ಹೆಚ್ಚಿನ ಬೇಡಿಕೆ, ಹೊಸ ಯು.ಜಿ ಕಾಲೇಜುಗಳಲ್ಲಿ ಹೊಸ ಪಿ.ಜಿ ವಿಷಯಗಳಿಗೆ ಸಂಯೋಜನೆ ನೀಡುವ ಸಂಬಂಧ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000 ಪ್ರಕರಣ 59,(2)ರ ಮತ್ತು (10)ರನ್ವಯ ಸಂಯೋಜನೆ ಪ್ರಕ್ರಿಯೆಗಳನ್ನು ಪ್ರಾರಂಭಿಸಬೇಕಾಗಿರುವುದರಿಂದ ರಾಜ್ಯ ಹಾಗೂ ಸ್ಥಳೀಯ ದಿನಪತ್ರಿಕೆಯಲ್ಲಿ ಆಗಸ್ಟ್ 1, 2020 ರಂದು ಸಂಯೋಜನಾ ಪ್ರಕಟಣೆಯನ್ನು ನೀಡಲಾಗಿತ್ತು. ನಂತರದಲ್ಲಿ ಎಲ್ಲಾ ಕಾಲೇಜುಗಳಿಂದ ಯು.ಜಿ ಕೋರ್ಸುಗಳಿಗೆ ಮತ್ತು ಪಿ.ಜಿ ಕೋರ್ಸುಗಳಿಗೆ ಸಂಯೋಜನಾ ಅರ್ಜಿಯನ್ನು ಸ್ವೀಕರಿಸಲಾಗಿತ್ತು.<br>ಸಿಂಡಿಕೇಟ್ ಸಭೆಯಿಂದ ಪ್ರದತ್ತವಾದ ಅಧಿಕಾರದಿಂದ ಮಾನ್ಯ ಕುಲಪತಿಯವರು ಅಗತ್ಯವಾದ ಆಯಾ ನಿಕಾಯಗಳಿಗೆ ಅನುಗುಣವಾಗಿ ತಜ್ಞರನ್ನೊಳಗೊಂಡಂತೆ ಸ್ಥಳೀಯ ವಿಚಾರಣಾ ಸಮಿತಿಯನ್ನು ರಚಿಸಿ, ಸಮಿತಿಯಲ್ಲಿ ಕಲಾ, ವಿಜ್ಞಾನ, ವಾಣಿಜ್ಯ ಮತ್ತು ಶಿಕ್ಷಣ ನಿಕಾಯದ ಡೀನರುಗಳು, ಮಾಜಿ ಡೀನರುಗಳು ಮತ್ತು ಹಿರಿಯ ವಿಷಯತಜ್ಞರು, ಪ್ರಾಧ್ಯಾಪಕರನ್ನೊಳಗೊಂಡಂತೆ ಅಧ್ಯಕ್ಷರ/ ಸದಸ್ಯರುಗಳ ಸಮಿತಿಯನ್ನು ರಚಿಸಲಾಗಿ, ವಿಚಾರಣಾ ಕಾರ್ಯಕ್ರಮವನ್ನು ರೂಪಿಸಲಾಗಿತ್ತು. ಅನಿವಾರ್ಯ ಸಂದರ್ಭದಲ್ಲಿ ಅಧ್ಯಕ್ಷರು/ಸದಸ್ಯರುಗಳು ಗೈರುಹಾಜರಾದ ಸಂದರ್ಭದಲ್ಲಿ ಸಮಿತಿಯಲ್ಲಿರುವ ಹಿರಿಯ ಪ್ರಾಧ್ಯಾಪಕರನ್ನು ಅಧ್ಯಕ್ಷರನ್ನಾಗಿ ಮಾಡಲು ಹಾಗೂ ಗೈರುಹಾಜರಾದ ಸದಸ್ಯರುಗಳ ಜಾಗಕ್ಕೆ ಆಯಾ ವಿಷಯಕ್ಕೆ ಸಂಬಂಧಪಟ್ಟಂತೆ ಬೇರೊಬ್ಬ ವಿಷಯತಜ್ಞರನ್ನು ಸೇರಿಸಲು ಮಾನ್ಯ ಕುಲಪತಿಗಳು ನಾಮನಿರ್ದೇಶನ ಮಾಡಿರುತ್ತಾರೆ. ಈ ಹಿನ್ನೆಲೆಯಲ್ಲಿ ಸಮಿತಿಗಳನ್ನು ರಚಿಸಿ Virtual Meeting ಮೂಲಕ ಪರಿಶೀಲಿಸಿ ವರದಿಯನ್ನು ಪಡೆಯಲಾಗಿದೆ.<br>ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಕಾಯ್ದೆ 2000 ಪ್ರಕರಣ 59ರ ಉಪಪ್ರಕರಣ 10ರಡಿಯಲ್ಲಿ ಸಂಯೋಜನಾ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿ ಸರ್ಕಾರಕ್ಕೆ ಹೊಸ ಪ್ರಥಮ ದರ್ಜೆ ಕಾಲೇಜು, ಸ್ನಾತಕೋತ್ತರ ಕೋರ್ಸ್ ಹಾಗೂ ಪ್ರೊಫೆಷನಲ್ ಕೋರ್ಸ್‌ಗಳ ಸಂಯೋಜನಾ ಪ್ರಸ್ತಾವನೆಯನ್ನು ಅನುಮೋದನೆಗಾಗಿ ಸಲ್ಲಿಸಬೇಕಾಗಿರುತ್ತದೆ. ಕೋವಿಡ್-19/ಸಾಂಕ್ರಾಮಿಕ ಪಿಡುಗು ವ್ಯಾಪಕವಾಗಿ ಹರಡುತ್ತಿರುವುದರಿಂದ ಕೇಂದ್ರ ಹಾಗೂ ರಾಜ್ಯ ಸರ್ಕಾರದ ನಿರ್ದೇಶನದಂತೆ ಸರ್ಕಾರಿ ರಜೆಯು ಘೋಷಣೆಯಾದ ಕಾರಣ ಸಂಯೋಜನಾ ಪ್ರಕ್ರಿಯೆಗಳನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿರುತ್ತದೆ. ಹಾಗೆಯೇ ಕರ್ನಾಟಕ ರಾಜ್ಯ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯ ಆದೇಶದಂತೆ ರಾಜ್ಯದ ಎಲ್ಲಾ ವಿಶ್ವವಿದ್ಯಾನಿಲಯಗಳ ಸಂಯೋಜಿತಾ ಪ್ರಕ್ರಿಯೆಗಳನ್ನು NIC ಸಂಸ್ಥೆಯವರು ಅಭಿವೃದ್ಧಿ ಪಡಿಸಿರುವ ತಂತ್ರಾಂಶದಲ್ಲಿ |

| | |
|---|---|
| | ಕೈಗೊಳ್ಳಲು ಸೂಚಿಸಿರುವುದರಿಂದ, 2021-22ನೇ ಶೈಕ್ಷಣಿಕ ಸಾಲಿನ ಎಲ್ಲಾ ಸಂಯೋಜಿತ ಕಾಲೇಜುಗಳ (ಸ್ವಾಯತ್ತ ಕಾಲೇಜುಗಳು ಮತ್ತು ಘಟಕ ಕಾಲೇಜುಗಳನ್ನು ಹೊರತು ಪಡಿಸಿ)ಸಂಯೋಜನಾ ಪ್ರಕ್ರಿಯೆಗಳನ್ನು Virtual Meeting ಮೂಲಕ ಕೈಗೊಳ್ಳಲಾಗಿರುತ್ತದೆ. |
| ತೀರ್ಮಾನ | 2021-2022ನೇ ಶೈಕ್ಷಣಿಕ ವರ್ಷಕ್ಕೆ ಸ್ಥಳೀಯ ತನಿಖಾ ಸಮಿತಿಯು ನೀಡಿರುವ ಆನ್‌ಲೈನ್ ಸಂಯೋಜನಾ ವರದಿಗಳನ್ನು ಸಿಂಡಿಕೇಟ್ ಸಭೆಯು ಸರ್ವಾನುಮತದಿಂದ ಅನುಮೋದಿಸಿತು. |
| ವಿಶೇಷ ಸಭೆ-02 | **Starting of University School of Engineering – reg** |
| | The Government of Karnataka has decided to implement NEP 2020 in all the Universities in the State of Karnataka. As such the University has also decided to introduce multidisciplinary studies under NEP-2020 in principle from theAcademic year 2021-22<br><br>In the background of the above the University has proposed and planning to start self-finance constituent University School of Engineering college from the academic year 2021-22.<br><br>The subject of starting of University Engineering college has been placed before the authorities of the University and it has been decided to approve the same after obtaining the formal approval of theAICTE, New Delhi.<br><br>The University has submitted its proposal to start self-finance constituent Engineering college from the academic year 2021-22 with the NOC issued by the Government of Karnataka.<br><br>The AICTE, New Delhi in its letter dated 14th July 2021 has conveyed its approval to start the constituent self-finance University School of Engineering from the academic year 2021-22 in the following courses:<br><br>➢ CIVIL ENVIRONMENTAL ENGINEERING<br>➢ ARTIFICIAL INTELLIGENCE AND MACHINE LEARNING<br>➢ ARTIFICIAL INTELLIGENCE (AI) AND DATA SCIENCE<br>➢ COMPUTER SCIENCE AND DESIGN<br>➢ BIOMEDICAL AND ROBOTIC ENGINEERING<br>The Syndicate at its meeting held on 28-5-2021 has approved for the creation of faculty of Engineering. Further, a draft statute has been prepared for the establishment and starting of University School of Engineering.<br><br>The Special AC which met on 24-09-2021 has approved the draft statutes prepared for starting of University School of Engineering. |

| | |
|---|---|
| | The subject regarding draft statutes for starting of University School of Engineering is placed before the Syndicate for consideration and decision. |
| **Decision** | **University School of Engineering** ಪ್ರಾರಂಭಿಸಲು ಸಿದ್ಧಪಡಿಸಿರುವ ಕರಡು ಅಧಿನಿಯಮವನ್ನು ಮಾನ್ಯ ಕುಲಾಧಿಪತಿಗಳ ಅಂಕಿತಕ್ಕಾಗಿ ಸರ್ಕಾರಕ್ಕೆ ಕಳುಹಿಸಲು ಶಿಫಾರಸ್ಸು ಮಾಡಲಾಯಿತು. |
| ವಿಶೇಷ ಸಭೆ-೦೩ | Hosting 96th Annual General Body Meeting and National Conference of the Vice-Chancellors of Association of Indian Universities. |
| | University of Mysore, Mysuru, Karnataka has been selected to host the 96th Annual General Body Meeting of the Association and National Confeence of the Vice-Chancellors scheduled to be held during 23rd -25th March, 2022.<br><br>Around 400 Vice-Chancellors across the country are expected to participate in the AIU Vice-Chancellors Conference and an estimated expenditure will be around Rs. 75 lakhs towards hosting of the conference (members's accommodation, Local travel and Food etc.,)<br><br>In this regard, a committee of the Association shall be visiting the University to assess the facilities available for hosting the Annual General Body meeting.<br><br>A resolution regarding approval of the Executive Committee/Board of Management has to be sent indicating the University of Mysore shall host the Conference. |
| **Decision** | The subject of hosting the 96th Annual General Body Meeting and National Conference of the Vice-Chancellors of Association of Indian Universities was **approved by the Syndicate.** |

ಅಂತಿಮವಾಗಿ ಸಭೆಯಲ್ಲಿ ಮುಕ್ತವಾಗಿ ಚರ್ಚಿಸಿ, ಸೂಕ್ತ ನಿರ್ಣಯಗಳನ್ನು ತೆಗೆದುಕೊಳ್ಳಲು ಸಹಕಾರ ಹಾಗೂ ಸಲಹೆಗಳನ್ನು ನೀಡಿರುವ ಎಲ್ಲಾ ಸದಸ್ಯರುಗಳಿಗೆ ವಂದನೆಗಳನ್ನರ್ಪಿಸುವ ಮೂಲಕ ಸಭೆಯು ಮುಕ್ತಾಯವಾಯಿತು.

ಕುಲಸಚಿವರು ಮತ್ತು ಸದಸ್ಯ ಕಾರ್ಯದರ್ಶಿ

ಕುಲಪತಿಗಳು ಮತ್ತು ಅಧ್ಯಕ್ಷರು